MYSORE LEGISLATIVE ASSEMBLY

Wednesday, 16th November 1966.

The House met in the Assembly Chamber, Vidhana Soudha, Bangalore, at Two of the Clock.

MR. SPEAKER [SRI B. VAIKUNTA BALIGA, B.A., B.L.] in the Chair.

OBITUARY REFERENCE

Re: the Demise of Sri K. Mallappa, Minister for Industries and Commerce.

MR. SPEAKER.—On this occasion at the very outset, I have to perform a sad duty of referring to the demise of the Hon'ble Minister Sri K. Mallappa.

I regret to inform the House of the demise of Sri K. Mallappa, Hon'ble Minister for Industries and Commerce of the Government of Mysore on the 21st August 1966.

Sri K. Mallappa was born in Kithoor in Coorg District. He obtained his B.A. Degree from the Central College, Bangalore and B.L. Degree from the Law College, Madras. He set up practice as a Member of the Bar at Mercara till he became a Minister in the erstwhile Coorg State in 1952. He was a Member of the Coorg Legislative Council from 1936 to 1946 and was President of Mercara Municipality from 1945 to 1952. He was elected as a Member of Coorg Legislative Assembly in 1952 and was Minister for Law and Order till the States' Reorganisation in November 1956. He was very much interested in the Co-operative Movement. He was Director of Coorg State Co-operative Bank and Chairman of the Mysore Small Warehousing Corporation.

He was a Member of the Mysore Legislative Assembly during 1956-57 and re-elected to the Mysore Legislative Assembly in the second and third General Elections from the Mercara Constituency and joined the Cabinet as a Minister for Industries and Commerce on the 14th March 1962, and did yeoman's service in discharge of his duties till his sad demise took place.

In his death the people and the State and the country as a whole have lost an able administrator, a devoted and sincere worker. Especially a person of profound knowledge and steadfast solid work, he was devoid of needless verbiage. I was lucky in earning his friendship. So, I feel a distinct personal loss. On behalf of the House, I convey our sincere condolences to the members of the bereaved family.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಯವರು).—ಸ್ವಾಮಿ, ಸಭಾಧ್ಯಕ್ಷರೇ, ತಾವು ಸಭೆಯ ಮುಂದೆ ಇಟ್ಟಿರತಕ್ಕಂಥ ದುಃಖ ಸೂಚನೆಯಲ್ಲಿ ಸಭೆಯ ಪರವಾಗಿ ಹಾಗೂ ನನ್ನ ಪರವಾಗಿ ನಾವೆಲ್ಲರೂ ಭಾಗಿಗಳು ಎನ್ನುವುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲು ನಿಂತಿದ್ದೇನೆ.

ಶ್ರೀಮಾನ್ ಮಲ್ಲಪ್ಪನವರ ಪರಿಚಯ ನನಗೆ ಸುಮಾರು 30 ವರ್ಷಗಳಿಂದ ಇದೆ. ಹಾಗೂ ಅವರು ಕೊಡಗಿನ ಕೌನ್ಸಿಲ್‌ನಲ್ಲಿ ನಾಕಷ್ಟು ಪ್ರತಿಶತ ಕೆಲಸ ಮಾಡಿದ್ದಾರೆ. ಅವರು ಚಿಕ್ಕವರಾಗಿದ್ದರೂ ಜನಗಳ ಪ್ರೀತಿ ಗೌರವಗಳನ್ನು ಗಳಿಸಿ ಯೋಗ್ಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದರು. ಅದರ ಪರಿಣಾಮವಾಗಿ ಕೊಡಗಿನ ಜನರು ಅವರನ್ನು ಪುನಃ ಕೊಡಗಿನ ಅಸೆಂಬ್ಲಿಗೆ ಚುನಾಯಿಸಿ, ಅವರು 1952ರಿಂದ 195 ರವರೆಗೆ ಅಲ್ಲಿ ಮಂತ್ರಿಗಳಾಗಿದ್ದರು. ಗೃಹ ಮಂತ್ರಿಯಾಗಿ, ಸಹಕಾರ ಮಂತ್ರಿಯಾಗಿ ಹಾಗೂ ಇತರೇ ಇಲಾಖೆಗಳಲ್ಲಿ ಅತ್ಯಂತ ಯೋಗ್ಯ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಿ ಎಲ್ಲರ ಪ್ರೀತಿಗೂ ಆದರಕ್ಕೂ ಪಾತ್ರರಾಗಿದ್ದರು, ಹಾಗೂ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅದರಲ್ಲೂ ಮಡಕೇರಿ ಟೌನ್ ಮುನಿಸಿಪಾಲಿಟಿ ಅಧ್ಯಕ್ಷರಾಗಿ ಸಾಕಷ್ಟು ಕೆಲಸ ಮಾಡಿ ಅವರ ಹೆಸರು ಶಾಶ್ವತವಾಗಿರತಕ್ಕ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಕೊಡಗಿನಲ್ಲಿ ಸಹಕಾರ ಮಂತ್ರಿಗಳಾಗಿ ಅವರು ಮಾಡಿರತಕ್ಕಂಥ ಕೆಲಸ ಇಂದಿಗೂ ಎಂದಿಗೂ ಉಳಿಯತಕ್ಕಂಥದ್ದಾಗಿದೆ. ಅನೇಕ ಜಿಲ್ಲೆಗಳನ್ನು ಹೋಲಿಸಿ ನೋಡಿದರೆ, ಕೊಡಗಿನ ಜಿಲ್ಲೆಯಲ್ಲಿ ಇವೊತ್ತು ಸಹಕಾರ ಸಂಸ್ಥೆಗಳು ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಾ ಇವೆ. ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾ ಇವೆ. ಅದಕ್ಕೆ ಕಾರಣ, ಬುನಾದಿ ಹಾಕಿ ಅವುಗಳನ್ನು ಬೆಳೆಸಿಕೊಂಡು ಬಂದಿರತಕ್ಕವರು ಶ್ರೀಮಾನ್ ಮಲ್ಲಪ್ಪನವರು. ನಾನು ಅವರನ್ನು ಅನೇಕ ವರ್ಷಗಳಿಂದ ಬಲ್ಲೆ. ಅವರ ದಕ್ಷತೆ, ಪ್ರಾಮಾಣಿಕತೆ, ನಿಷ್ಠೆ, ಕರ್ತವ್ಯ ಪರಿಪಾಲನೆಗಳನ್ನು ಕಂಡು ಅವರನ್ನು ನನ್ನ ಸಹೋದ್ಯೋಗಿಗಳನ್ನಾಗಿ ಆರಿಸಿಕೊಂಡು ನಾವು 5 ವರ್ಷಗಳ ಕಾಲ ಅವರೊಡನೆ ಕೆಲಸ ಮಾಡತಕ್ಕಂಥ ಸುಯೋಗ ನನಗೆ ದೊರಕಿತ್ತು. ಕೈಗಾರಿಕಾ ಮಂತ್ರಿಯಾಗಿ ಅವರು ಬಹಳ ಚಾಕಚಕ್ಯತೆಯಿಂದ ಕೆಲಸ ಮಾಡಿದರು. ಪರದೇಶಕ್ಕೆ ಹೋಗಿ ಅಲ್ಲಿನ ಉದ್ಯೋಗಸ್ಥರ ಹಾಗೂ ಪ್ರಭಾವಶಾಲಿಗಳಾದ ಕೈಗಾರಿಕೆ ಸಂಸ್ಥೆಗಳ ಪರಿಚಯವನ್ನು ಸಾಕಷ್ಟು ಮಾಡಿಕೊಂಡು ನಮ್ಮ ಮೈಸೂರಿನಲ್ಲಿ ಅನೇಕ ಕೈಗಾರಿಕೆಗಳನ್ನು ದೊಡ್ಡದನ್ನಾಗಿ ಮಾಡುವುದಕ್ಕೂ ಹಾಗೂ ಹೊಸ ಕೈಗಾರಿಕೆಗಳ ಸ್ಥಾಪನೆ ಮಾಡುವುದಕ್ಕೂ ಕಾರಣಕರ್ತರಾದರು. ಯಾವುದೇ ವಿಷಯ ಬಂದರೂ ಅದನ್ನು ಕೂಲಂಕಷವಾಗಿ, ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷೆ ಮಾಡಿ ಒಂದು ನಿರ್ಧಾರಕ್ಕೆ ಬಂದು ತಮ್ಮ ನಿರ್ಧಾರವನ್ನು ಕೈಗೂಡಿಸುವುದರಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾ ಇದ್ದರು. ಅಂತಹವರನ್ನು ಕಳೆದುಕೊಂಡದ್ದರಿಂದ ದುಃಖವಾಗಿರುವುದಲ್ಲದೆ ಬಹಳ ನಷ್ಟವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಹೆಚ್ಚಿಗೆ ಮಾತನಾಡತಕ್ಕ ಅವಶ್ಯಕತೆ ಇಲ್ಲ. ಇಲ್ಲಿ ಹೃದಯದಲ್ಲಿ ಈ ಅಭಿಪ್ರಾಯಗಳು ಬಂದು ನಮ್ಮ ಮನಸ್ಸನ್ನು ಕಲಕಿರುತ್ತದೆ. ಇಂತಹ ಸಂದರ್ಭದಲ್ಲಿ ಅವರ ಆತ್ಮಕ್ಕೆ ನಮ್ಮ ದುಃಖ ಸೂಚನೆಯನ್ನು ಸಲ್ಲಿಸಿ ಅವರ ಮನೆಯವರಿಗೂ ನಮ್ಮ ದುಃಖವನ್ನು ಸೂಚಿಸಬೇಕೆಂದು ಹೇಳಿ ಈ ಸಭೆಯ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ದಿವಂಗತ ಮಲ್ಲಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಂತಾಪ ಸೂಚನೆಗೆ ನನ್ನ ಪೂರ್ಣ ಬೆಂಬಲ ನೀಡುತ್ತೇನೆ. ಶ್ರೀಮಾನ್ ದಿವಂಗತ ಮಲ್ಲಪ್ಪನವರು ಈ ಶಾಸನ ಸಭೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಅವರ ಸೇವೆಯನ್ನು ಉತ್ತಮ ದರ್ಜೆಯಲ್ಲಿ ಸಲ್ಲಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳಂಥ ಮಂತ್ರಿಗಳೋಪಾದಿಯಲ್ಲಿ ಈ ಸಭೆಯಲ್ಲಿ ವರ್ತನೆ ಮಾಡುತ್ತಾ ಬಂದಿದ್ದಾರೆ. ಅವರು ಪ್ರಕೃತಿ ಸೌಂದರ್ಯದ ಮಧ್ಯದಲ್ಲಿ ಇರುವ ಕೊಡಗು ಪ್ರದೇಶದಲ್ಲಿ ಜನಿಸಿದ ವ್ಯಕ್ತಿ. ಆತ್ಮದಲ್ಲಿಯೂ ಅಷ್ಟೇ ಪ್ರಕೃತಿ ದತ್ತವಾದ ಮಾನವ ಸಹಜವಾದ ಸದ್ಗುಣಗಳಿಂದ ಕೂಡಿದ ಒಬ್ಬ ಸದ್ಗುಣ ಸಂಪನ್ನರಾಗಿದ್ದ ವ್ಯಕ್ತಿ, ಶ್ರೀಮಾನ್ ಮಲ್ಲಪ್ಪನವರು. ಯಾವುದೇ ಪ್ರಶ್ನೆಯಲ್ಲಿ ಎಷ್ಟೇ ತೊಡಕಿದ್ದರೂ ಕೂಡ ಅದಕ್ಕೆ ಉತ್ತರ ಕೊಡುವಾಗ ಶ್ರೀಮಾನ್ ಮಲ್ಲಪ್ಪನವರು ಸತ್ಯವನ್ನು ಈ ಸಭೆಯಲ್ಲಿ ಅನೇಕ ಸಾರಿ ಎತ್ತಿ ಹಿಡಿದಿದ್ದಾರೆ. ಎಷ್ಟೋ ಕ್ಲಿಷ್ಟವಾದ ಸಂದರ್ಭದಲ್ಲೂ ಕೂಡ ಅವರು ಸತ್ಯವನ್ನು ಎತ್ತಿ ಹಿಡಿದ ವ್ಯಕ್ತಿಗಳು. ಶ್ರೀಮಾನ್ ಮಲ್ಲಪ್ಪನವರ ಆತ್ಮಕ್ಕೆ ಚಿರಶಾಂತಿ ದೊರಕಲಿ! ಅವರ ಕುಟುಂಬದವರಿಗೂ ನಮ್ಮ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಚಿರವಾಗಿರಲಿ ಎಂದು ಹೇಳಿ ಈ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆ.

---

†Idicates that the remarks or speeches have not been revised by the member concerned.

†ಶ್ರೀ ಸಿದ್ದಯ್ಯಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈಗ ನಥೆಯ ಮುಂದೆ ಮುಂಡಿನಿರ ತಕ್ಕ ಸಂತಾಪ ಸೂಚಕ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ, ಶ್ರೀಮಾನ್ ಮಲ್ಲಪ್ಪನವರ ವಿಷಯವಾಗಿ ಹೆಚ್ಚಾಗಿ ಹೇಳದೆ, ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಮಲ್ಲಪ್ಪನವರು ಜನರ ಸೇವೆಗಾಗಿ ನಾನಾ ರೀತಿಯಿಂದ ದುಡಿದಿದ್ದಾರೆ, ಸಂಘ ಸಂಸ್ಥೆಗಳ ಉನ್ನತಿ ಮತ್ತು ಅಭಿವೃದ್ಧಿಗಾಗಿ ಬಹಳ ಕೆಲಸ ಮಾಡಿದ್ದಾರೆ. ಅಲ್ಲದೆ ಅವರು ದಕ್ಷ ಆಡಳಿತಗಾರರಾಗಿದ್ದರು. ನಮ್ಮ ರಾಜ್ಯದ ಔದ್ಯೋಗಿಕ ಪ್ರಗತಿಗಾಗಿ ಪರದೇಶಕ್ಕೆ ಹೋಗಿ ಬಂದು ಇಲ್ಲಿಯೂ ಅದೇ ತರಹ ಹೆಚ್ಚಿನ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕೆನ್ನುವ ಸಮಯದಲ್ಲಿಯೇ ಅಕಸ್ಮಿಕವಾಗಿ ಅವರು ನಿಧನ ಹೊಂದಿದುದು ನಮ್ಮ ದುರದೃಷ್ಟವೆಂದೇ ಹೇಳಬೇಕು. ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ನೀಡರೆಂದು ನಾನು ಪ್ರಾರ್ಥನೆ ಸಲ್ಲಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—May I now request the Hon'ble Members to stand in silence for two minutes as a mark of respect?

The Hon'ble Members then stood in silence for Two Minutes.

May I now suggest that we adjourn for the rest of the day as a mark of respect to the memory of the deceased and re-assemble tomorrow to conduct further business? I hope I am voicing the feelings of all the Members of the House when I say that.

The House will now stand adjourned and re-assemble tomorrow at 1-00 P.M.

The House adjourned at Fifteen Minutes past Two of the Clock to meet again at one of the Clock on Thursday the 17th November 1966.